**ಪ್ರಧಾನಮಂತ್ರಿಯಿಂದ ಭೂತಾನ್ ದೊರೆಯ ಭೇಟಿ (ನವೆಂಬರ್ 11, 2025)**

ನವೆಂಬರ್ 11, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಥಿಂಪುವಿನಲ್ಲಿ ಭೂತಾನ್‌ನ ಗೌರವಾನ್ವಿತ ದೊರೆ ಜಿಗ್ಮೆ ಖೇಸರ್ ನಮ್ಗೆಲ್ ವಾಂಗ್‌ಚುಕ್ ಅವರನ್ನು ಭೇಟಿಯಾದರು. ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಹೆಚ್ಚಿಸುವ ಮತ್ತು ಬಲಪಡಿಸುವ ಕುರಿತಾಗಿ ಉಭಯ ನಾಯಕರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗ್ಗೆ ಕೂಡಾ ಅವರು ಚರ್ಚೆ ನಡೆಸಿದರು. ದೆಹಲಿಯ ದುರಂತದಲ್ಲಿ ಮೃತಪಟ್ಟವರಿಗಾಗಿ ದೊರೆ ಸಂತಾಪ ವ್ಯಕ್ತಪಡಿಸಿದರು.

2. ಎರಡೂ ದೇಶಗಳ ನಡುವಿನ ಸ್ನೇಹ ಮತ್ತು ಸಹಕಾರದ ನಿಕಟ ಸಂಬಂಧಗಳನ್ನು ರೂಪಿಸುವಲ್ಲಿ ಬಹು ತಲೆಮಾರಿನ ಡ್ರುಕ್ ಗ್ಯಾಲ್ಪೋಸ್ (ರಾಜರುಗಳು) ಒದಗಿಸಿದ ದೂರದೃಷ್ಟಿಯ ಮಾರ್ಗದರ್ಶನಕ್ಕಾಗಿ ಪ್ರಧಾನಮಂತ್ರಿಯವರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಭೂತಾನ್‌ನ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗಾಗಿ ಭಾರತ ಸರ್ಕಾರವು ಒದಗಿಸಿದ ಅಮೂಲ್ಯ ಬೆಂಬಲಕ್ಕಾಗಿ ಗೌರವಾನ್ವಿತ ದೊರೆಯು ಪ್ರಶಂಸೆ ವ್ಯಕ್ತಪಡಿಸಿದರು.

3. ಪ್ರಸ್ತುತ ತಾಶಿಚೊಡ್ಜಾಂಗ್‌ನ ಗ್ರ್ಯಾಂಡ್ ಕುಯೆನ್ರೇ ಹಾಲ್‌ನಲ್ಲಿ ಪ್ರತಿಷ್ಠಾಪಿಸಲಾಗಿರುವ ಭಾರತದಿಂದ ತಲುಪಿಸಲಾದ ಭಗವಾನ್ ಬುದ್ಧನ ಪವಿತ್ರ ಪಿಪ್ರಹ್ವಾ ಅವಶೇಷಗಳ ಮುಂದೆ ನಿಂತು ಇಬ್ಬರೂ ನಾಯಕರು ಪ್ರಾರ್ಥಿಸಿದರು. ಥಿಂಪುವಿನಲ್ಲಿ ಪವಿತ್ರ ಪಿಪ್ರಹ್ವಾ ಅವಶೇಷಗಳ ಪ್ರದರ್ಶನವು ಗೌರವಾನ್ವಿತ ನಾಲ್ಕನೇ ದೊರೆಯ 70 ನೇ ಜನ್ಮ ವಾರ್ಷಿಕೋತ್ಸವ ಮತ್ತು ಜಾಗತಿಕ ಶಾಂತಿ ಮತ್ತು ಸಂತೋಷಕ್ಕಾಗಿ ಭೂತಾನ್ ಆಯೋಜಿಸಿರುವ ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವದ ಸಂದರ್ಭದಲ್ಲೇ ನಡೆಯುತ್ತಿದೆ.

4. ಉಭಯ ನಾಯಕರು ಜಂಟಿಯಾಗಿ 1020 ಮೆಗಾವ್ಯಾಟ್‌ನ ಪುನತ್ಸಂಗ್ಚು-II ಜಲವಿದ್ಯುತ್ ಯೋಜನೆಯನ್ನು ಉದ್ಘಾಟಿಸಿದರು, ಇದು ಭಾರತ ಮತ್ತು ಭೂತಾನ್ ನಡುವೆ ಬೆಳೆಯುತ್ತಿರುವ ಪರಸ್ಪರ ಪ್ರಯೋಜನಕಾರಿ ಇಂಧನ ಪಾಲುದಾರಿಕೆಯಲ್ಲಿ ಮೈಲಿಗಲ್ಲಾಗಿದೆ, ಜೊತೆಗೆ ಇದು ಎರಡೂ ದೇಶಗಳ ಸಾಮಾನ್ಯ ಜನರ ಜೀವನಕ್ಕೆ ಗಮನಾರ್ಹ ಪ್ರಯೋಜನಗಳನ್ನು ತಂದಿದೆ.

5. ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ಬಲಪಡಿಸಲು ನವೀಕರಿಸಬಹುದಾದ ಇಂಧನ, ಮಾನಸಿಕ ಆರೋಗ್ಯ ಸೇವೆಗಳು ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮೂರು ತಿಳಿವಳಿಕೆ ಒಪ್ಪಂದಗಳ ವಿನಿಮಯಕ್ಕೆ ಕೂಡಾ ಅವರು ಸಾಕ್ಷಿಯಾದರು. ಈ ಸಂದರ್ಭದಲ್ಲಿ, ಇಂಧನ ಯೋಜನೆಗಳಿಗೆ ಹಣಕಾಸು ಒದಗಿಸಲು ಭೂತಾನ್‌ಗೆ ₹4000 ಕೋಟಿಗಳ ರಿಯಾಯಿತಿ

ಸಾಲವನ್ನು ಭಾರತ ಸರ್ಕಾರ ಘೋಷಿಸಿತು. ತಿಳಿವಳಿಕೆ ಒಪ್ಪಂದಗಳು ಮತ್ತು ಘೋಷಣೆಗಳ ಪಟ್ಟಿಯನ್ನು ಇಲ್ಲಿ ನೋಡಬಹುದು. ( ಲಿಂಕ್ )

ಥಿಂಪು

ನವೆಂಬರ್ 11, 2025